ನಾಲ್ಕು ಹೀಗೆ ಮಾಡುತ್ತ ಜೊತೆಗೆ ಮತ್ತಿಷ್ಟು ಸಾಲ ಮಾಡಿ ಇನ್ನಷ್ಟು ಆಡು ಕೊಂಡು ಒಟ್ಟು ಮೂವತ್ತು ಆಡುಗಳನ್ನು ಮಾಡಿಕೊಂಡಿದ್ದಳು. ಮಕ್ಕಳಿಲ್ಲದ ಆಕೆಯ ಪಾಲಿಗೆ ಆಡುಗಳೇ ಸರ್ವಸ್ವ. ಹಳ್ಳದ ದಂಡೆಗೆ ಒಂದು ಮುಂಜಾನೆ ಬುತ್ತಿ ಕಟ್ಟಿಕೆಂಡು ಆಡುಗಳನ್ನು ಮೇಯಿಸಾಕ ಹೋದಳೆಂದರೆ ಅವಳು ಬರುವುದು ಮತ್ತೆ ಸಂಜೆಗೇ. ರಾತ್ರಿಯಾದರೆ ಚಪ್ಪರದ ಸುತ್ತ ಮೇಲೆ ತಂತಿ ಜಾಲರಿ ಇದ್ದ ಜೋಪಡಿಯೊಂದರಲ್ಲಿ ಅವುಗಳನ್ನು ಕೂಡಿ ಹಾಕಿ ಅವು ಮಲಗಿದ ಮೇಲೆ ತಾನು ಮಲಗಲು ಹೋಗುತ್ತಿದ್ದುದು. ಮಹಾ ಮಳೆ ಹೊಡೆತಕ್ಕೆ ಚಪ್ಪರ ಕುಸಿದು, ಸುತ್ತಲಿನ ತಂತಿ ಜಾಲರಿಯಿಂದಾಗಿ ಹೊರಹೋಗಲೂ ಆಗದೆ ಒಂದರ ಮೇಲೊಂದು ಬಿದ್ದು ಅರಚುತ್ತ ಉಸಿರುಗಟ್ಟಿ ಮೂವತ್ತಕ್ಕೆ ಮೂವತ್ತು ಅಲ್ಲೇ ಅಸು ನೀಗಿದ್ದವು. ಹಳ್ಳದಿಂದ ವಾಪಸು ಬರುವ ಹೊತ್ತಿಗೆ ರಣಜಿತ್, ಅಬ್ದುಲ್ಲ, ತಿಮೋತಿಯರೊಂದಿಗೆ ಜನ ತಮ್ಮ ದುಃಖ ದುಮ್ಮಾನಗಳನ್ನು ಹೇಳಿಕೊಳ್ಳುತ್ತ ಹಗುರಾಗುತ್ತಿದ್ದರು. ಹಸುಗಳ ಕೊರಳ ಹಗ್ಗ ಕತ್ತರಿಸಲೂ ಪುರುಸೊತ್ತಾಗದ್ದಕ್ಕಾಗಿ ಗ್ವಾದಿಲಿಯಲ್ಲಿ ಕಟ್ಟಿದಲ್ಲೇ ಪ್ರಾಣ ಬಿಟ್ಟ ಹಸುಗಳ ಬಗ್ಗೆ ಒಬ್ಬ ಹೇಳಿದರೆ, ಹಾಗೆ ಹಗ್ಗ ಕತ್ತರಿಸಿ ಬಿಟ್ಟ ಹಸುವೊಂದು ನೀರಲ್ಲಿ ಹೊಡಕೊಂಡು ಬರುತ್ತಿರುವಾಗ ಹಳ್ಳದ ದಂಡೆಗಿದ್ದ ಬೇವಿನ ಮರಕ್ಕೆ ಹಗ್ಗ ಸಿಕ್ಕಿಸಿಕೊಂಡು ಪ್ರಾಣ ಬಿಟ್ಟಿದ್ದು ಈಗ ನೀರಿಳಿದ ಮೇಲೆ ಎಂಟಡಿ ಎತ್ತರದ ಮರದಲ್ಲಿ ಕೊಳೆತು ತೇಲಾಡುತ್ತಿದ್ದುದನ್ನು ಹೊಲಕ್ಕೆ ಹೋಗಿದ್ದಾಗ ನೋಡಿದ್ದಾಗಿ ಮತ್ತೊಬ್ಬ ಹೇಳುತ್ತಿದ್ದ. ಮನೆಯಲ್ಲಿಟ್ಟಿದ್ದ ಬಂಗಾರ, ಹಣವನ್ನು ತೆಗೆದುಕೊಳ್ಳಲು ಬಿಡದಂತೆ ಕ್ಷಣ ಕ್ಷಣಕ್ಕೂ ನೀರಿನ ಮಟ್ಟ ಏರುತ್ತಿದ್ದುದು ನೋಡಿ ಎದೆಯೊಡೆದು ಹೋಗಿಯೇ ತಮ್ಮ ತಾತ ತೀರಿಕೊಂಡದ್ದೆಂದು ಇನ್ಯಾರೋ ಹೇಳ್ತಿದ್ದರು.

ಶಿವಶರಣನಿಗಾಗಿ ಕಾಯುತ್ತ ಕುಳಿತಿದ್ದಳು ಹುಸೇನ್‌ಬಿ.

'ಏನಂಗೆ, ಬಂದ್ಯಾ?' ಎಂದ ಶಿವಶರಣ. ಹಳ್ಳಿಯವರು ಇವನನ್ನು ಹೆಚ್ಚು ಹಚ್ಚಿಕೊಳ್ಳುವುದಕ್ಕೆ ಇವನ ಪಕ್ಕಾ ಹಳ್ಳಿ ಉಚ್ಚರಣೆಯ ಭಾಷೆ ಮತ್ತು ಏಡುಪೇಚಿಲ್ಲದೆ ಎಲ್ಲರನ್ನು ಹಚ್ಚಿಕೊಳ್ಳುವ ಗುಣಗಳೇ ಕಾರಣವಿರಬಹುದೆಂದು ತಿಮೋತಿ ಯೋಚಿಸಿದ.

'ಎಪ್ಪಾ ಎಂಗನ್ನ ಮಾಡಿ ನನ್ ಆಡಿಗೆ ಸರ್ಕಾರದಿಂದ ರೊಕ್ಕ ಬರುವಂಗ ಮಾಡರೆಪ್ಪ, ನಿಮಿಗೆ ಪುಣ್ಣ ಬರುತ್ತ' ಎಂದು ಕೈ ಮುಗಿದು ನಿಂತುಕೊಂಡಳು ಹುಸೇನ್‌ಬಿ. ತಿಮೋತಿ, ಅಬ್ದುಲ್ಲ, ರಣಜಿತ್, ಫರ್ಜಾನಾ, ಗಂಗಮ್ಮ, ಅಮರೇಶ, ಮಂಜುನಾಥ ಎಲ್ಲ ಬಂದು ಕೂಡಿಕೊಂಡು ಶಿವಶರಣನ ಪಕ್ಕದಲ್ಲಿ ಕಟ್ಟೆ ಮೇಲೆ ಕುಳಿತುಕೊಂಡರು. ಈಗ ಶಿವಶರಣನಿಗೆ ಮತ್ತಷ್ಟು ಹುಕಿ ಬಂತು.

'ಹಿಂಗೇ, ಸರ್ಕಾರದ ರೊಕ್ಕ ಸತ್ತ ಮ್ಯಾಲೇ ಬರ್ತಾದ. ಅದನ್ನು ನಂಬಿಕ್ಯಬ್ಯಾಡ. ಯದ್ದಲದಿನ್ಯಾಗ ಮಳೆಮಂದಿನ್ನ ಸಾಲಿಗುಡ್ಯಾಗ ಇಳಿಸ್ಯಾರಲ್ಲ. ಅಲ್ಲಿ ಅವರಿಗೆ ದಿನಾಲಿ ಬ್ಯಾರೆ ಬ್ಯಾರೆ ಸಂಗ ಸಂಸ್ಥೆಗಳವರು ಊಟ ತಂದು ಕೊಟ್ಟು, ಮಂದೆಲ್ಲ ಉಂಡು ಹಳೆ ಕಥೆ ಆದ್ಮ್ಯಾಲೆ ಡೀಸಿ ಆಫೀಸ್‌ಲಿಂದ ಚಿತ್ರಾನ್ನದ ಪಾಕೇಟ್‌ಗಳು ತಗೊಂಬಂದು ಕೊಡವ್ರಂತ. ಕೊಡದಂದ್ರೇನು ಏಸ್ ಮಂದಿ ಆರ ಆಸು ಪಾಕೀಟ್ ಇರ ಚೀಲನ್ನ ಕಟ್ಟೇಗಿ ಇಳಿಸಿ ಹೋಗಿಬುಡಾದು. ಬಿಸ್ಲೂರಾಗ ಒಂದು ಮುಂಜಾಲೆ ಮಾಡಿರ ಚಿತ್ರಾನ್ನ ಅದು. ಬಿಸಿಬಿಸೀದು ಅಂಗೇ ಪ್ಯಾಕ್ ಮಾಡಿಕೆಂಡು ಬ್ಯಾರೆ ಬ್ಯಾರೆ ಊರಾಗ ಇಳಿಸಿ ಲಾಸ್ಟಿಗಿ ಇಲ್ಲಿಗಿ ಬರದ್ರಾಗ ಇವರ ಊಟ ಆಗಿರದು. ಪಾಕೀಟ್‌ನಾಗಿನ ಅನ್ನ ಉಮುರಕ್ಕ ನೀರು ಬಿಟ್ಟು ಪಿಚಿಪಿಚಿ ಆಗಿರದು. ಎಂಗ ಬಂದ ಚೀಲ ಅಂಗೇ ಬುಳ್ಳಿದ್ವಂತ ಸಾಲಿ ಹಿಂದ. ಎಲ್ಲ ನಾಯಿ ಹಂದಿಗಳ ಪಾಲಾಗ್ತಿತ್ತಂತ. ಆಮ್ಯಾಲೆ ಅಲ್ಲೇ ಅಡಗಿ ಮಾಡಕ ಸುರು ಮಾಡಿದ್ದು ಅವರು. ಅದರ ಕಥೆ ಬ್ಯಾರೆ ಆದ ಮತ್ತೆ' ಎಂದು ಸರ್ಕಾರದ ಒಳ್ಳೆಯ ಯೋಜನೆಗಳು ಕೆಟ್ಟ ಅನುಷ್ಠಾನದಿಂದಾಗಿ ಹೇಗೆಲ್ಲ ಹಳ್ಳ ಹಿಡೀತವೆ ಅಂತ ಒಂದು ಸಣ್ಣ ಲೆಕ್ಚರೇ ಕೊಟ್ಟ. ರಣಜಿತ್‌ಗೆ ಈ ಮಾತುಕತೆಯ ತಲೆಬುಡ ಅರ್ಥವಾಗಲಿಲ್ಲವಾಗಿ ಅಬ್ದುಲ್ಲನತ್ತ ನೋಡಿದ. ಅಬ್ದುಲ್ಲ ಹಿಂದಿಯಲ್ಲಿ ಅದನ್ನೆಲ್ಲ ಬ್ರೀಫ್ ಮಾಡಿದ ಮೇಲೆ ಓಹೋ ಎಂದು ತಲೆಹಾಕಿದ. ರಣಜಿತ್‌ಗೆ ಅಬ್ದುಲ್ಲ ಹೇಳುತ್ತಿರುವುದು ತನ್ನ ಬಗೆಗೇ ಆಗಿರಬಹುದೇ ಎಂದು ಅನುಮಾನಿಸಿದ ಶಿವಶರಣ, ಅದನ್ನು ಮೀರಲೆಂಬಂತೆ ಒಂದು ಬಗೆಯ ಹೀರೋಯಿಕ್ ಆವೇಶವನ್ನು ಆವಾಹಿಸಿಕೊಂಡು ಹುಸೇನ್‌ಬಿಯನ್ನು ಹತ್ತಿರ ಬರುವಂತೆ ಕೈಸನ್ನೆ ಮಾಡಿ ಕರೆದ.

'ಏನಮ್ಮ ನೀನು ಮೂವತ್ತು ಆಡು ಒಮ್ಮಿಗೆ ಕೊಣಕಂಡಿದ್ದೇನು?' ಎಂದ.

'ಇಲ್ಲ ಸಾರು. ಒಂದು ಕೊಣಕಂಡು ಒಂದಕ್ಕೆರಡು, ಎರಡಕ್ಕ ನಾಲ್ಕು ಮಾಡಿ ಬೆಳೆಸಿದ್ದೆ' ಅಂದಳಾಕೆ ಕೈ ಮುಗಿದುಕೊಂಡೇ.

'ಅದು ಮಾತು. ಈಗ ಒಂದು ಆಡಿನ ರೊಕ್ಕ ನಾನು ಕೊಡ್ತೀನಿ. ಮತ್ತೆ ಬೆಳಸು. ಆಯ್ತಾ? ಯಾ ಸರ್ಕಾರ, ಪರ್ಕಾರ ಏನು ಕೊಡತಾದ? ಕೊಡವ್ರು ಬ್ಯಾರ್ಯಾನ ಮ್ಯಾಲೆ' ಅಂದವನೇ ಪ್ಯಾಂಟಿನ ಒಳಜೇಬಿಂದ ಐದು ಸಾವಿರದ ಗಟ್ಟ ತೆಗೆದು ಎಲ್ಲರಿಗೆ ಕಾಣುವಂತೆ ಮೂರು ಸಾವಿರ ಕ್ಯಾಶ್ ಎಣಿಸಿ ಅವಳಿಗೆ ಕೊಟ್ಟ. `ಚಿಚೂಕ್' ಅಂತ ಶಬ್ದವಾಯಿತು. ವಾಲೇಕಾರ ಈರಪ್ಪ ಫೋಟೊ ಸರಿಯಾಗಿ ಬಂದಿರುವುದನ್ನು ಖಾತ್ರಿಪಡಿಸಿಕೊಳ್ಳುತ್ತಿದ್ದ. ಇದನ್ನು ಊಹಿಸಿಯೇ ಇರದಿದ್ದ ಹುಸೇನ್‌ಬಿ ಕಣ್ಣಾಲಿಗಳಲ್ಲಿ ನೀರು ತುಂಬಿಕೊಂಡು ಸೀದಾ ಕಟ್ಟೆಯಿಂದ ಇಳಿಬಿದ್ದಿದ್ದ ಶಿವಶರಣನ ಕಾಲುಗಳಿಗೆ ನಮಸ್ಕರಿಸಿ, ಕಣ್ಣೀರಿನಿಂದ ತೊಯ್ಯಿಸಿದಳು. ಕಟ್ಟೆಯಿಂದ ಕೆಳಗಿಳಿದು

'ಏ ಎಮ್ಮ ಎಮ್ಮ ಹಂಗೆಲ್ಲ ಮಾಡಬಾಡ. ನೀನು ದೊಡ್ಡಕಿದ್ದಿ. ಮನಿಶಗ ಮನಿಶ ಆಸರೆ ಆಗದು ಧರ್ಮ. ಇರ್ಲಿ. ಅವು ನಿನುವು ಫೋಟೋ ಇದ್ವಲ್ಲ, ತಂದುಕೊಡು. ಬ್ಯಾರೆ ಒಂದು ಕೆಲಸ ಮಾಡ್ತೀನಿ' ಎಂದ.

'ಆಯ್ತೆಪ್ಪ. ಈಗೆ ತರ್ತೀನಿ' ಎಂದು ಹುಸೇನ್‌ಬಿ ಸೆರಗಿನಲ್ಲಿ ದುಡ್ಡು ಮಡಚಿಟ್ಟುಕೊಂಡು ನಡೆದಳು.

ತಿಮೋತಿ ಅಬ್ದುಲ್ಲನತ್ತ ನೋಡಿದ.

9

'ನಮಸ್ಕಾರ ಸಾಹೇಬ್ರೆ' ಎನ್ನುತ್ತ ಒಳಗಡಿಯಿಟ್ಟರು ಶೇಖ್‌ಸಾಹೇಬರು, ಎಂದಿನಂತೆ ಹಿಂದೆ ಅವರ ನೆರಳಾಗಿ ಮೂಲಿಮನಿ ಮಲ್ಲಪ್ಪನವರು.

'ಬರ್‍ರಿ ಬರ್‍ರಿ' ಎನ್ನುತ್ತ ಗತ್ತು ಬೆರೆತ ಆತ್ಮೀಯತೆಯಲ್ಲಿ ಅವರನ್ನು ಬರಮಾಡಿಕೊಂಡರು ಸಂಪಾದಕ ವಿಕೆಯವರು.

ಕಚೇರಿಯಲ್ಲಿ ಯಾರೂ ಇರಲಿಲ್ಲ. ವೆಂಕಟೇಶ ಪ್ರೆಸ್ ಮೀಟಿಗೆ ಹೋಗಿದ್ದನೆಂದು ಕಾಣುತ್ತದೆ. ಸಂಪಾದಕರು ಕೂಡ ಒಳ್ಳೆ ಮಾತಾಡುವ ಮೂಡಿನಲ್ಲಿದ್ದರು. ಮಲ್ಲಪ್ಪನವರು ಪಕ್ಕದ ಟೇಬಲ್ ಮೇಲಿದ್ದ ಅಂದಿನ ಪೇಪರ್ ಅನ್ನು ಎಳೆದು ಬಿಡಿಸಿಕೊಂಡು, ಶೇಖ್ ಸಾಹೇಬರಿಗೂ ಕಾಣುವಂತೆ ಓರೆಯಾಗಿ ಹಿಡಿದು ನೋಡತೊಡಗಿದರು. ಡೀಸಿಯವರ ಸಂದರ್ಶನವನ್ನು ಸ್ವತಃ ಸಂಪಾದಕರೇ ಮಾಡಿದ್ದು, ಅದೇ ಮುಖಪುಟದ ಮುಖ್ಯಸುದ್ದಿಯಾಗಿತ್ತು. ಅದನ್ನು ಓದಿ ಮೆಚ್ಚಿ ಪ್ರತಿಕ್ರಿಯಿಸಲಿ ಎಂದು ಒಳಗೆ ಆಶೆಪಡುತ್ತ, ಆ ಆಶೆಯು ಮುಖದ ಮೇಲೆ ಪ್ರಕಟಗೊಳ್ಳುವುದನ್ನು ಮರೆಮಾಚುವ ಯತ್ನದಲ್ಲಿ ಸಂಪಾದಕರು ಏನೋ ಮಹತ್ವವಾದದ್ದನ್ನು ಹುಡುಕುತ್ತಿರುವವರಂತೆ ಟೇಬಲ್ಲಿನ ಡ್ರಾಯರಿನೊಳಗೆ ಕೈ ಹಾಕಿ ತಡಕತೊಡಗಿದರು. ಸಟಸಟನೆ ಪುಟ ತಿರುವಿದ ಮಲ್ಲಪ್ಪನವರು ಪೇಪರ್ ಓದಿದ ಶಾಸ್ತ್ರ ಮುಗಿಸಿ ಮಡಚಿಟ್ಟು, ತಮ್ಮ ಕೆಲಸದ ಪೂರ್ವಪೀಠಿಕೆಗಾಗಿ ಮನದಲ್ಲೇ ತಯಾರಿ ಮಾಡಿಕೊಳ್ಳತೊಡಗಿದ್ದು ಕಂಡು ಸಂಪಾದಕರಿಗೆ ಯಾರೋ ಮುಖದ ಮೇಲೆ ಒಂದು ತಂಬಿಗೆ ನೀರು ಉಗ್ಗಿದಂತೆ ನಿರಾಶೆಯಾಯ್ತು.

'ಏನ್ ವಿಶೇಷ? ಮತ್ತೆ ಏನ್ ಚಟುವಟಿಕೆ ನಡೀತೀರಿ?' ಎಂದು ಅನಗತ್ಯ ಲಂಬಿಸಬಹುದಾದ ಔಪಚಾರಿಕ ಮಾತುಗಳಿಗೆ ಕೊನೆ ಹಾಡಿ, ಸೀದಾ ವಿಷಯಕ್ಕೆ ಬಂದರು ವಿಕೆ. ತಕ್ಷಣ ಮಲ್ಲಪ್ಪನವರು

'ಅದೇ ಸರ್, ಮಳೆ ಸಂತ್ರಸ್ತರ ಪರ ಸಹಾನುಭೂತಿ ವ್ಯಕ್ತಪಡಿಸಿ ಒಂದು ಪಂಜಿನ ಮೆರವಣಿಗೆ ಮಾಡಬೇಕಂತಿದಿವಿ. ನೀವು ಅದನ್ನು ಉದ್ಘಾಟಿಸಬೇಕು ಅಂತ ಕೇಳಕ ಬಂದ್ವಿ' ಎಂದರು. ಆ ಮಾತಿಗೆ ದೇಸಾಯಿಯವರು ಒಳಗೆ ಇಷ್ಟಗಲ ಅದರೆಂಬುದನ್ನು ಅವರ ಮುಖಚರ್ಯೆಯೇ ಹೇಳುತ್ತಿತ್ತು.

'ಒಳ್ಳೆ ಕೆಲಸ. ಅಂಥವುಕ್ಕ ನಮ್ಮ ಸಹಾಯ ಯಾವತ್ತೂ ಇರ್ತದ. ಸಾಹಿತಿಗಳು, ಬುದ್ಧಿಜೀವಿಗಳು ಸಮಾಜದ ಬಗ್ಗೆ ಮಾಡ ಕೆಲಸ ಮಾಡದು ಬಹಳ ಇಂಪಾರ್ಟೆಂಟ್ ಆದ' ಅಂದು, ಸ್ವಲ್ಪ ಏನೋ ಗಹನವಾಗಿ ಯೋಚಿಸುವವರಂತೆ ನಟಿಸಿ

'ನಮ್ ಡೀಸಿ ಸಾಹೇಬ್‌ರಿಗೆ ಹಾಕ್ಯಳ್ರಿ. ಈ ಮಳೆ ಸಂಬಂಧವಾಗಿ ಭಾಳ ಕೆಲ್ಸ ಮಾಡ್ಯಾರ ಅವ್ರು. ನಮ್ ಪೇಪರನ್ಯಾಗ ಇವತ್ತು ಅವರ ಡೀಟೇಲ್ಡ್ ಸಂದರ್ಶನ ಐತೆ, ನೋಡಿರ್ಬೇಕು ನೀವು' ಅನ್ನುತ್ತ ಸರಿಯಾಗಿ ಮುಖಪುಟದ ತಮ್ಮ ಸಂದರ್ಶನ